ಕಳೆದುಕೊಂಡ, ಕ್ಷಣ ಕ್ಷಣಕ್ಕೂ ತಾಳ್ಮೆಗೆಡುವ, ಶೋಕಿಗೆ ಮರುಳಾಗುವ ವಿದ್ಯಾರ್ಥಿನಿಯರನ್ನು ನೋಡುತ್ತ 'ಎಲ್ಲರೂ ನೋಡೋಕೆ ಮಾತ್ರ ಊರ್ವಶಿಯರಂತೆ ಸೆಳೆಯುತ್ತಾರೆ. ಈ ಗೊಂಬೆಗಳ ಚಂದ ಇಟ್ಕೊಂಡು ಬದುಕ್ಲಿಕ್ಕಾಗ್ತದಾ' ಎಂದು ಆ ಗೊಂಬೆಗಳನ್ನು ತಾನು ಪ್ರೀತಿಸದೇ ಇರುವುದಕ್ಕೆ ಸಮಜಾಯಿಷಿಕೊಟ್ಟುಕೊಂಡು ಸಮಾಧಾನಪಟ್ಟುಕೊಳ್ಳುತ್ತಿದ್ದುದುಂಟು. ಆದರೆ, ರಂಜಿನಿಯನ್ನು ನೋಡಿದರೆ ಅವಳ ಸಹಜ ಸುಂದರ ರೂಪು, ಸಣ್ಣ ಹೂ ಪಕಳೆ ಉದುರಿದಷ್ಟು ಇಂಪಾಗಿರುತ್ತಿದ್ದ ಅವಳ ಮಾತು, ರಾತ್ರಿ ಚುಕ್ಕಿಯಂತೆ ಮಿಂಚುತ್ತಿದ್ದ ಅವಳ ಕಣ್ಣ ಹೊಳಪು, ಸಮುದ್ರದ ಅಲೆಗಳಲ್ಲಿ ತೇಲಿಸಿಬಿಡುವಂತಿದ್ದ ಅವಳ ಸಂಗೀತದ ಏರಿಳಿತ ಇದೆಲ್ಲದ್ದಕ್ಕಿಂತ ಹೆಚ್ಚಾಗಿದ್ದ ಅವಳ ಪ್ರಬುದ್ಧತೆ, ಅವಳ ಅಭಿರುಚಿ ಇವೆಲ್ಲವನ್ನೂ ಶಿವಶಂಕರ್ ಒಳಗೊಳಗೇ ಆರಾಧಿಸುತ್ತಿದ್ದುದು ಸುಳ್ಳಲ್ಲ. ಆದರೆ, ತಾನೊಬ್ಬ ಲೆಕ್ಚರರ್– ಅವಳು ವಿದ್ಯಾರ್ಥಿನಿ ಅನ್ನುವುದು ನೆನಪಾಗಿ ತಮ್ಮ ಆಸೆ ಕನಸುಗಳನ್ನು ತನ್ನೊಳಗೆ ಜೀರ್ಣಿಸಿಕೊಂಡು ಸುಮ್ಮನಾಗಿಬಿಡುತ್ತಿದ್ದರು. ತಮ್ಮ ಬಳಿ ಚೆಲ್ಲು ಚೆಲ್ಲಾಗಿ ಏನನ್ನೋ ನೆಪ ಮಾಡಿಕೊಂಡು ಬರುತ್ತಿದ್ದವರನ್ನು ಅರ್ಥ ಮಾಡಿಕೊಂಡಂತೆ ಕಣ್ಣಲ್ಲೇ ನಿರಾಕರಿಸಿ ಅವರ ಬಳಿ ಔಪಚಾರಿಕವಾಗಿ ಮಾತಾಡಿ ಕಳುಹಿಸಿಬಿಡುತ್ತಿದ್ದರು. ಆದರೆ, ಅಪರೂಪಕ್ಕೆ ಸಂಕೋಚದಿಂದ ಯಾವುದೋ ವಿಷಯವೊಂದನ್ನು ಕೇಳಲು ಬರುತ್ತಿದ್ದ ರಂಜನಿಯನ್ನು ತನ್ನೊಳಗೆ ವಿಚಿತ್ರವಾಗಿ ಗೌರವಿಸುತ್ತ ಏನನ್ನೋ ಅವಳಲ್ಲಿ ಕಂಡುಕೊಂಡಂತೆ ಕಣ್ಣರಳಿಸುತ್ತಿದ್ದರು.

ಇಂತದ್ದೇ ಶಿವಶಂಕರ್ ಸರ್‌ನ ಕಣ್ಣರಳಿಸುವಿಕೆ ರಂಜಿನಿಗೆ ಕಾಡುತ್ತಿತ್ತು. ಸಂಗೀತದಲ್ಲಿ ರಂಜಿನಿಗೆ ಶಿವರಂಜಿನಿ ರಾಗವೆಂದರೆ ಪಂಚಪ್ರಾಣ, ನೂರಾರು ಭಾವಗಳನ್ನು ಉಕ್ಕಿಸುವ ಈ ವಿಷಾದ ರಾಗವನ್ನೇ ಅವಳು ಆಗಾಗ ಧ್ಯಾನಿಸಿಬಿಡುತ್ತಾಳೆ. ಅದರಲ್ಲಿ ಶಿವಶಂಕರ್ ಶಿವನಾಗಿದ್ದರೆ, ರಂಜಿನಿಯಾಗಿ ನಾನಿದ್ದೇನೆ ಎನ್ನುವ ಭಾವಕ್ಕೋ ಏನೋ ಗೊತ್ತಿಲ್ಲ, ಅವಳಿಗೆ ಶಿವರಂಜಿನಿ ರಾಗವೆಂದರೆ ಅದು ಆನಂದವನ್ನು ತನ್ನೊಳಗೆ ಮೊಗೆ ಮೊಗೆದು ತಂದು ವಿಚಿತ್ರ ಅನುಭೂತಿ ನೀಡುತ್ತಿತ್ತು.

ಈಗ ಮತ್ತೊಮ್ಮೆ ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡಳು. ಕಾಡಿಗೆ ಹಚ್ಚಿದ ಕಣ್ಣುಗಳಲ್ಲಿ ಹುಣ್ಣಿಮೆ ಹೊಳಪಿತ್ತು, ಎಲ್ಲವನ್ನೂ ಹೇಳಿಬಿಡಬೇಕು ಎನ್ನುವ ತುಟಿಗಳಲ್ಲಿ ಆಡಿದರೂ ಮುಗಿಯದಷ್ಟು ಮಾತುಗಳ ಮುನ್ನುಡಿಯಿತ್ತು. ಹೊರಗಿನ ಮರವೊಂದರಲ್ಲಿ ಕೂತ ಮೈನಾ ಹಕ್ಕಿ ಮತ್ತೆ ಕೂಗಿದಾಗ ಆಹಾ ಎಷ್ಟು ಚೆಂದ ಹಾಡ್ತೀ... ಎಂದು ಆ ಹಕ್ಕಿಯನ್ನು ಕಿಟಕಿಯಿಂದ ನೋಡುತ್ತ ತನ್ನೊಳಗೆ ಕೊಂಡಾಡಿದಳು. ಗಂಟೆ ಒಂಬತ್ತಾಯ್ತು ಎಂದು ಗಡಿಬಿಡಿಯಲ್ಲಿ



ಕಾಲೇಜಿನ ಹಾದಿ ಹಿಡಿದಳು. ಕಾಲೇಜಿನ ಹೊರಾಂಗಣ ಎಂದಿಗಿಂತಲೂ ಮೌನವಾಗಿತ್ತು. ಬೆಳಗಾದರೆ ಕನಸುಗಂಗಳ ಜೀವಗಳ ಪರಿಮಳದಲ್ಲಿ ರಂಗೇರಿಬಿಡುತ್ತಿದ್ದ, ಯಾರನ್ನೋ ನೋಡಿ ಗುಡುಗುವ, ಹುಡುಕುವ, ಓಡಾಡುವ, ಕಾಡಿಸುವ, ಕೆಲವೊಮ್ಮೆ ಘನ ಗಂಭೀರವಾಗಿ ಚೀರಾಡುವ, ಮತ್ತೆ ಕೆಲವೊಮ್ಮೆ ಫೇಟ್ ಚಿಟ್ಟೆಯಂತೆ ತೇಲಿಬಿಡುವ ನೂರಾರು